ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 171-177
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ತ.ರಾ.ಸು.ರವರ "ಮಸಣದ ಹೂವು" ಕಾದಂಬರಿಯಲ್ಲಿ ಸ್ತ್ರೀ–ಧ್ವನಿ

**ಇಂದಿರಾ ಪ. ಹೋಳಕರ**

ಕನ್ನಡ ಉಪನ್ಯಾಸಕರು, ಆರ್.ಪಿ.ಡಿ. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಟಿಳಕವಾಡಿ, ಬೆಳಗಾವಿ.

**Abstract:**

*ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಘಟ್ಟವಾದ ಪ್ರಗತಿಶೀಲ ಸಾಹಿತ್ಯವು ಜೀವನದ ವಾಸ್ತವಿಕತೆಯನ್ನು ಬಿಚ್ಚಿಟ್ಟಿದೆ. ಪ್ರಗತಿಶೀಲ ಸಾಹಿತ್ಯವು ಸಾಹಿತ್ಯ ಲೋಕದಲ್ಲಿ ಹೆಚ್ಚು ಓದುಗರನ್ನು ಸೃಷ್ಟಿಸಿದೆ. ಅ.ನ.ಕೃ, ಬಸವರಾಜ ಕಟ್ಟೀಮನಿ, ತ.ರಾ.ಸು, ನಿರಂಜನ ಮೊದಲಾದ ಜನಪ್ರಿಯ ಬರಹಗಾರರು ಈ ಪಂಥವನ್ನು ಕಟ್ಟಿ ಬೆಳೆಸಿದ್ದಾರೆ. ಜೀವನದ ನಗ್ನ ಸತ್ಯಗಳನ್ನು ಸಾಹಿತ್ಯ ಎಂಬ ಮಾಧ್ಯಮದ ಮೂಲಕ ಜನರ ಮುಂದಿಟ್ಟ ಕಾದಂಬರಿಕಾರ ತ.ರಾ.ಸು ಬರಹ ಅವರ ರಕ್ತಕ್ಕೆ ಅಂಟಿಕೊಂಡಂತೆ ಕಾಣುತ್ತದೆ. ಪ್ರಖ್ಯಾತ ಕಾದಂಬರಿಕಾರರಾದ ಇವರು ಚಂದವಳ್ಳಿಯ ತೋಟ, ಹಂಸಗೀತೆ, ದುರ್ಗಾಸ್ತಮಾನ, ನಾಗರ ಹಾವು, ಬೆಂಕಿಯ ಬಲೆ, ಗಾಳಿಮಾತು, ಚಂದನದ ಗೊಂಬೆ, ಬಿಡುಗಡೆಯ ಬೇಲಿ ಮೊದಲಾದ 90ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಪ್ರಸ್ತುತ ಲೇಖನದಲ್ಲಿ "ಮಸಣದ ಹೂವು" ಕಾದಂಬರಿಯನ್ನು ವಿಮರ್ಶಿಸಲಾಗಿದೆ.*

**Keywords:** *ಕನ್ನಡ ಕಾದಂಬರಿ, ಪ್ರಗತಿಶೀಲ ಸಾಹಿತ್ಯ, ತ.ರಾ.ಸು., ಮಸಣದ ಹೂವು, ಸ್ತ್ರೀ ಧ್ವನಿ.*

**ಪೀಠಿಕೆ**

ಪ್ರಗತಿಶೀಲ ಸಾಹಿತ್ಯ ಪಂಥದ ಪ್ರಮುಖ ಕಾದಂಬರಿಕಾರರಲ್ಲಿ ಒಬ್ಬರಾದ ತಳುಕಿನ ರಾಮಸ್ವಾಮಯ್ಯ ಸುಬ್ಬರಾವ್ ಅವರು ತ.ರಾ.ಸು ಎಂದೇ ಜನಪ್ರಿಯರಾಗಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಒಂದು ಘಟ್ಟವಾದ ಪ್ರಗತಿಶೀಲ ಸಾಹಿತ್ಯ ಪಂಥ ಜೀವನದ ವಾಸ್ತವಿಕತೆಯನ್ನು ಬಿಚ್ಚಿಟ್ಟಿದೆ. ಕಡಿಮೆ ಅವಧಿ ಪ್ರಕಟಣೆಗೊಂಡಿದ್ದರೂ ಸಾಹಿತ್ಯ ಲೋಕದಲ್ಲಿ ಹೆಚ್ಚು ಓದುಗರನ್ನು ಸೃಷ್ಟಿಸಿದೆ. ಅ.ನ.ಕೃ, ಬಸವರಾಜ ಕಟ್ಟೀಮನಿ, ತ.ರಾ.ಸು, ನಿರಂಜನ ಮೊದಲಾದ ಜನಪ್ರಿಯ ಬರಹಗಾರರು ಈ ಪಂಥವನ್ನು ಕಟ್ಟಿ ಬೆಳೆಸಿದ್ದಾರೆ. ಈ ಪಂಥದ ಪ್ರಮುಖ ಆಶಯ ಜೀವನದ ನಗ್ನ ಸತ್ಯಗಳನ್ನು, ವಾಸ್ತವಾಂಶಗಳನ್ನು ಬಿಚ್ಚಿಡುವುದು. ರೋಷ, ಕಿಚ್ಚು, ಆವೇಶ ಇವರ ಸಾಹಿತ್ಯದ ಸಹಜ ಸ್ವರೂಪಗಳಾದವು. ಇವರ ತಾತ್ವಿಕತೆಯು "ದುರ್ಬಲತೆಯಿಂದ ಶಾಂತಿ ದೊರೆಯುವುದಿಲ್ಲ, ಕ್ರಾಂತಿಯಿಂದಲೇ ಶಾಂತಿ ಸಾಧ್ಯ" ಎಂಬುದು. ತಮ್ಮ ಸಾಹಿತ್ಯ ಕ್ರಾಂತಿಯ ಖಡ್ಗಕ್ಕೆ ಲೋಕದ ತಾಮಸ ಕಳೆಗಳು ನಡುಗಬೇಕು, ಅದು ದುರ್ಬಲರ, ಬಡವರ, ದಲಿತರ ರಕ್ಷಾಕವಚವಾಗಬೇಕು ಎಂಬ ಮನೋಧೋರಣೆ ಇವರದಾಗಿತ್ತು, ಇದಕ್ಕಾಗಿ ಇವರು ಸಣ್ಣಕಥೆ ಮತ್ತು ಕಾದಂಬರಿ ಎಂಬ ಸಾಹಿತ್ಯ ಸ್ವರೂಪವನ್ನು ಬಳಸಿಕೊಂಡರು. ಆದರೆ ಈ ಪ್ರಗತಿಶೀಲರ ಸತ್ಯದ ನುಡಿಗಳು ಕೆಲವೊಂದು ಜನರಿಂದ ಟೀಕೆ, ಟಿಪ್ಪಣಿಗೆ ಒಳಗಾದವು. ಈ ಸಾಹಿತ್ಯ ಪಂಥ ಅಶ್ಲೀಲ ಸಾಹಿತ್ಯ ರಚನೆಗೆ, ಬರೀ ಮಾರ್ಕ್ಸವಾದದ ಪ್ರತಿಪಾದನೆಗೆ

**Please cite this article as:** ಇಂದಿರಾ ಪ. ಹೋಳಕರ. (2023). ತ.ರಾ.ಸು.ರವರ "ಮಸಣದ ಹೂವು" ಕಾದಂಬರಿಯಲ್ಲಿ ಸ್ತ್ರೀ–ಧ್ವನಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(4), 171–177.

ಅಣಿಯಾಗಿದೆ ಎಂಬ ಆರೋಪಕ್ಕೆ ಒಳಗಾಯಿತು. ಆದರೂ ಧೃತಿಗೆಡದೆ ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕಿಡದೆ, ಯಾವುದೇ ಆರೋಪಕ್ಕೆ ತಲೆ ಕೆಡಿಸಿಕೊಳ್ಳದೆ ಹೇಳಬೇಕಾದ ವಾಸ್ತವವನ್ನು ಹೇಳಿಯೇ ಬಿಟ್ಟರು. ಬದುಕಿನ ಸತ್ಯ ತುಂಬಾ ಕಹಿ; ಅದನ್ನು ಒಪ್ಪಿಕೊಳ್ಳಲು, ಆ ಕಟುಸತ್ಯದ ಬಗ್ಗೆ ಮಾತಾಡಲು ಧೈರ್ಯ ಬೇಕು. ಆ ಧೈರ್ಯವನ್ನು ಪ್ರಗತಿಶೀಲ ಪಂಥದವರು ತೋರಿದ್ದಾರೆ ಎಂಬುದು ನನ್ನ ಅಭಿಪ್ರಾಯ. ಸಮಾಜದಲ್ಲಿ ಕುರಿಗಳಂತೆ ಗೋಣು ಹಾಕುವ ಜನರೆ ಹೆಚ್ಚಾಗಿದ್ದಾರೆ. ವ್ಯವಸ್ಥೆಗೆ ಕಟ್ಟು ಬಿದ್ದಿದ್ದಾರೆ, ಅಪ್ಪಾ ಹಾಕಿದ ಆಲದ ಮರವೆಂದು ನೇಣು ಹಾಕಿಕೊಳ್ಳುವ ಜನರಿದ್ದಾರೆ. ಜೀವನ ಇರೋದೆ ಬೇರೆ, ನಾವಾಡೋದೆ ಬೇರೆ, ಮಾಡುತ್ತಿರುವುದು ಇನ್ನೂ ವಿಭಿನ್ನ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವ್ಯವಸ್ಥೆಗೆ ಕಟ್ಟು ಬಿದ್ದು ಜೀವನದ ವಾಸ್ತವಾಂಶಗಳನ್ನು ಗಾಳಿಗೆ ತೂರಿ ಬಾಳುವುದನ್ನು ಕಾಣುತ್ತೇವೆ. ಈ ನಿಜಾಂಶವನ್ನು ಪ್ರಗತಿಶೀಲರು ತಮ್ಮ ಸಾಹಿತ್ಯದಲ್ಲಿ ಬಿಂಬಿಸಿದ್ದಾರೆ. ಜೀವನದ ನಗ್ನ ಸತ್ಯಗಳನ್ನು ಸಾಹಿತ್ಯ ಎಂಬ ಮಾಧ್ಯಮದ ಮೂಲಕ ಜನರ ಮುಂದಿಟ್ಟ ಕಾದಂಬರಿಕಾರ ತ.ರಾ.ಸು ರವರು ಕನ್ನಡದ ಮೊದಲ ಪ್ರಾಧ್ಯಾಪಕರಾದ ತಳುಕಿನ ವೆಂಕಣಯ್ಯನವರ ತಮ್ಮನ ಮಗ. ಪ್ರಗತಿಶೀಲ ಸಾಹಿತ್ಯ ಪಂಥದ ನೇತಾರ ಅ.ನ.ಕೃ ಇವರ ಗುರು. ಇಂತಹ ಸಾಹಿತ್ಯಿಕ ವಾತಾವರಣದಲ್ಲಿ ಬೆಳೆದ ತ.ರಾ.ಸು ಬರಹ ತುಂಬಾ ಹರಿತ, ಶೈಲಿ ಸುಂದರ. ಬರಹ ಅವರ ರಕ್ತಕ್ಕೆ ಅಂಟಿಕೊಂಡಂತೆ ಕಾಣುತ್ತದೆ. ಪ್ರಖ್ಯಾತ ಕಾದಂಬರಿಕಾರರಾದ ಇವರು ಚಂದವಳ್ಳಿಯ ತೋಟ, ಹಂಸಗೀತೆ, ದುರ್ಗಾಸ್ತಮಾನ, ನಾಗರ ಹಾವು, ಬೆಂಕಿಯ ಬಲೆ, ಗಾಳಿಮಾತು, ಚಂದನದ ಗೊಂಬೆ, ಬಿಡುಗಡೆಯ ಬೇಲಿ ಮೊದಲಾದ 90ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಅದರಲ್ಲಿ ಅನೇಕ ಕಾದಂಬರಿಗಳು ಚಲನಚಿತ್ರಗಳಾಗಿವೆ. ಅವರ ಎಲ್ಲ ಕಾದಂಬರಿಗಳ ಪಟ್ಟಿಯನ್ನು ನೋಡಿದಾಗ ನನ್ನ ಗಮನ ಸೆಳೆದದ್ದು “ಮಸಣದ ಹೂವು” ಎಂಬ ಶೀರ್ಷಿಕೆಯ ಕಾದಂಬರಿ. ಮಸಣದ ಹೂವು ಯಾವುದು ಎಂದು ತಿಳಿಯುವ ಕುತೂಹಲ ನನ್ನನ್ನು ಕಾದಂಬರಿ ಓದುವಂತೆ ಪ್ರಚೋದಿಸಿತು. ತೆರೆದು ನೋಡಿದರೆ ವೇಶ್ಯಾವೃತ್ತಿಯನ್ನು ಒಳಗೊಂಡಿದೆ. ಕಾದಂಬರಿ ಓದುವ ಕುತೂಹಲ ಇನ್ನೂ ಹೆಚ್ಚಾಯಿತು. ಏಕೆಂದರೆ ಈ ಸಮಸ್ಯೆ ಜೀವಂತ ಜ್ವಾಲಾಮುಖಿಯಾಗಿ ಸಮಾಜವನ್ನು ಸುಡುತ್ತಿದೆ. ಅದೇನೇ ಇರಲಿ ಈ ಕಾದಂಬರಿಯನ್ನು ಪ್ರಾಯೋಗಿಕವಾಗಿ ವಿಮರ್ಶಿಸಲಾಗಿದೆ.

ತ.ರಾ.ಸು.ರವರ ಅದ್ಭುತ ರಚನೆಗಳಲ್ಲಿ ಒಂದಾದ “ಮಸಣದ ಹೂವು” ಜನಪ್ರಿಯ ಸಾಮಾಜಿಕ ಕಾದಂಬರಿ. ಚಲನಚಿತ್ರವೂ ಕೂಡ ಆಗಿದೆ. ಈ ಚಿತ್ರವನ್ನು ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದರು. ಆದರೆ ವಿಧಿಯಾಟದಿಂದಾಗಿ ಪುಟ್ಟಣ್ಣ ಕಣಗಾಲ್ ರವರು ಇದೆ ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ವಿಧಿವಶರಾದರು. ಹೀಗಾಗಿ ಈ ಚಿತ್ರದ ನಿರ್ದೇಶನವನ್ನು ಕೆ.ಎಲ್.ಎಸ್.ಸ್ವಾಮಿ ಪೂರ್ಣಗೊಳಿಸಿದರು. ಈ ಚಿತ್ರ ಕೆಲವು ವಿಭಾಗಗಳಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿಗಳಿಗೆ ಭಾಜನವಾಗಿದೆ.

“ಮಸಣದ ಹೂವು” ಈ ಕಾದಂಬರಿಯು ವೇಶ್ಯಾವೃತ್ತಿಯನ್ನು ವಸ್ತುವಾಗುಳ್ಳ ಕಾದಂಬರಿ. ಇದು 2020 ರಲ್ಲಿ ಏಳನೆಯ ಮುದ್ರಣ ಕಂಡಿದೆ. ಈ ಕಾದಂಬರಿಯು ಮೊದಲಿನಿಂದಲೂ ಸಮಾಜಕ್ಕೆ ಒಂದು ಜಾಡ್ಯದಂತೆ ಅಂಟಿಕೊಂಡಿರುವ ವೇಶ್ಯಾವೃತ್ತಿಗೆ ಕಾರಣಗಳನ್ನು ತಿಳಿಸುವುದರ ಜೊತೆಗೆ ಇದರಿಂದಾಗಿ ಮಹಿಳೆ ಯಾವ ರೀತಿ ಪ್ರಾಚೀನ ಕಾಲದಿಂದಲೂ ಶೋಷಣೆಗೆ ಒಳಗಾಗುತ್ತಿದ್ದಾಳೆ ಎಂಬುದನ್ನು ತಿಳಿಸುತ್ತದೆ. ಬಡತನ, ಹಸಿವು, ವಿವಾಹದ ವಿಷಮತೆ ಮೊದಲಾದ ಕಾರಣಗಳಿಂದಾಗಿ ಮಹಿಳೆ ಯಾವ ರೀತಿ ವೇಶ್ಯಾವೃತ್ತಿಗೆ ಇಳಿದಳು ಎಂಬುದನ್ನು ತ.ರಾ.ಸು.ರವರು ತುಂಬಾ ಮಾರ್ಮಿಕವಾಗಿ ತಿಳಿಸಿದ್ದಾರೆ.

“ವೇಶ್ಯಾವೃತ್ತಿ” ಅತ್ಯಂತ ಪ್ರಾಚೀನ ವೃತ್ತಿ. “ಗಂಡು–ಹೆಣ್ಣಿನ ಕಾಮ ಜೀವನ ಎಂದು

ಆರಂಭವಾಯಿತೋ ಅಂದೆ ಈ ಸಮಸ್ಯೆಯೂ ಜನಸಿರಬಹುದು, ಈ ವಿಷಬಳ್ಳಿಗೆ ಅಂಕುರಾರ್ಪಣವಾಗಿರಬಹುದು" ಎಂದು ತ.ರಾ.ಸು ಮುನ್ನುಡಿಯಲ್ಲಿ ಉಲ್ಲೇಖಿಸಿದ ಮಾತುಗಳು ನೂರಕ್ಕೆ ನೂರರಷ್ಟು ಸತ್ಯವಾಗಿವೆ. ಹೆಣ್ಣು–ಗಂಡು ಇಬ್ಬರೂ ಜೀವಿಗಳೇ, ಇಬ್ಬರಲ್ಲೂ ಭಾವನೆಗಳಿವೆ. ಅದರಲ್ಲಿ ಕಾಮ ಭಾವವೂ ಒಂದು ಹೀಗಾಗಿ ಈ ಮಾತು ಒಪ್ಪಿತವಾಗಿದೆ.

"ಮಸಣದ ಹೂವು" ಕಾದಂಬರಿ ಇತಿಹಾಸದ ಪುಟಗಳನ್ನು ತಿರುವಿ ನೋಡಿ ವಾಸ್ತವವನ್ನು ವಿಮರ್ಶಿಸುವಂತೆ ಮಾಡಿದೆ. ಪುರಾಣಗಳ ಕಾಲದಿಂದಲೂ ಒಂದಲ್ಲ ಒಂದು ರೀತಿಯಿಂದ ಹೆಣ್ಣಿನ ಶೋಷಣೆ ನಡೆಯುತ್ತಲೇ ಇದೆ. ಹೆಣ್ಣನ್ನು ಕೇವಲ ಕಾಮ–ಭೋಗದ ವಸ್ತುವನ್ನಾಗಿ ನೋಡುತ್ತಾ ಬಂದಿದ್ದಾರೆ. ಇದಕ್ಕೆ ಇತಿಹಾಸದಲ್ಲೂ, ವರ್ತಮಾನದಲ್ಲೂ ಸಾಕಷ್ಟು ಉದಾಹರಣೆಗಳಿವೆ. ಮನುಸ್ಮೃತಿಯಲ್ಲಿ ಉಲ್ಲೇಖವಾದ, ಮನು ಹೇಳಿದನೆಂದು ನಂಬಲಾದ "ನ ಸ್ತ್ರೀ ಸ್ವಾತಂತ್ರ್ಯ ಅರ್ಹತೆ" ಎಂಬ ಮಾತು ಇದಕ್ಕೆ ಉದಾಹರಣೆಯಾಗಿದೆ. ಮಹಾ ವಿದ್ವಾಂಸ ಚಾಣಕ್ಯನು ಕೂಡ ಹೆಣ್ಣನ್ನು ಹೀಯಾಳಿಸಿ ಮಾತನಾಡಿದ್ದಕ್ಕೆ ಆಧಾರಗಳಿವೆ. ಆದರೆ ಈ ರೀತಿ ಅವಹೇಳನದ ಮಾತುಗಳು ಎಷ್ಟರ ಮಟ್ಟಿಗೆ ಸರಿ. ಇಪ್ಪತ್ತೊಂದನೆ ಶತಮಾನದಲ್ಲಿ ಗಂಡು–ಹೆಣ್ಣು ಸಮಾನತೆಯನ್ನು ತರಲು ಪ್ರಯತ್ನಿಸುತ್ತಿರುವಾಗ ಈ ಮಾತನ್ನು ಒಪ್ಪಿಕೊಳ್ಳಲು ಸಾಧ್ಯವೇ? ನಿಜವಾಗಿಯೂ ಇಂದಿನ ದಿನಮಾನಗಳಲ್ಲಿ ಸ್ತ್ರೀಯರಿಗೆ ಪುರುಷನಿಗೆ ಸಮಾನವಾದ ಸ್ಥಾನಮಾನ ದಕ್ಕುತ್ತಿದೆಯೇ? ಅವಳಿಗೆ ಸಂಪೂರ್ಣ ಸ್ವಾತಂತ್ರ್ಯ ಇದೆಯೇ? ಎಲ್ಲ ಸ್ತ್ರೀಯರಿಗೂ ಅದು ದೊರೆತಿದೆಯೇ? ಎಂಬ ಹಲವಾರು ವಿಷಯಗಳ ಕುರಿತು ಆಲೋಚಿಸುವಂತೆ ತ.ರಾ.ಸು ರವರ ಮಸಣದ ಹೂವು ಕಾದಂಬರಿ ಮಾಡುತ್ತದೆ ಎಂಬುವುದರಲ್ಲಿ ಎರಡು ಮಾತಿಲ್ಲ.

20ನೆಯ ಶತಮಾನದಲ್ಲಿ ಬರೆದ "ಮಸಣದ ಹೂವು" ಕಾದಂಬರಿಯ ವಿಷಯವಸ್ತು ಇಂದಿನ ಸಮಸ್ಯೆಯೂ ಆಗಿದೆ. ಸ್ವರೂಪ ಬೇರೆಯಾಗಿರಬಹುದು ಅಷ್ಟೇ. ಹೆಣ್ಣನ್ನು ಜೀವಂತ ಸುಡುವ ಜ್ವಾಲಾಮುಖಿಯಂತೆ ವೇಶ್ಯಾವೃತ್ತಿ ಇನ್ನೂ ಬೆಳೆಯುತ್ತಲೇ ಇದೆ. ದಿನ ಬೆಳಗಾದರೆ ವೃತ್ತ ಪತ್ರಿಕೆಗಳಲ್ಲಿ ಕಾಣೆಯಾದ ಮಹಿಳೆಯರ ಪಟ್ಟಿ; ಕೆಲವೊಂದು ಪರದೆಯ ಮುಂದೆ, ಕೆಲವೊಂದು ಪರದೆಯ ಹಿಂದೆ. ಹೀಗೆ ಪ್ರಾಚೀನ ಕಾಲದಲ್ಲಿ ಸಾಮಾಜಿಕ ಸಮಸ್ಯೆಯಾಗಿದ್ದ ವೇಶ್ಯಾವೃತ್ತಿ ಇಂದು ಯಾವುದೇ ಭಯ ಭೀತಿಯಿಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರವಾಗಿ ನಿರಾತಂಕವಾಗಿ ನಡೆದಿದೆ. ಕಾದಂಬರಿಯಲ್ಲಿ ಪಾರ್ವತಿ ಹಾಗೂ ಭಾಗೀರಥಿಯನ್ನು ಯಾವ ರೀತಿಯಿಂದ, ಯಾವ ಕಾರಣಕ್ಕಾಗಿ ಮಾರಾಟ ಮಾಡಿದರು ಎಂಬ ವಿಷಯವನ್ನು ಓದಿದಾಗ ವರ್ತಮಾನದಲ್ಲಿ ಅದೆಷ್ಟೋ ಪಾರ್ವತಿಯರು ಸದ್ದಿಲ್ಲದೆ ಮಾರಾಟವಾಗುತ್ತಿರುವ ದೃಶ್ಯಗಳು ಕಣ್ಣ ಮುಂದೆ ಬಂದು ನಿಲ್ಲುತ್ತವೆ. ವೇಶ್ಯಾವೃತ್ತಿಗೆ ಮಾರಾಟವಾದ ಈ ಹೆಣ್ಣು ಮಕ್ಕಳನ್ನು ಸಾಹುಕಾರರು ತಮ್ಮ ಹಣ, ಅಧಿಕಾರದ ದರ್ಪದಿಂದ ತಮ್ಮ ಕಾಮತೃಷೆಯನ್ನು ತೀರಿಸಿಕೊಳ್ಳಲು ಯಾವ ರೀತಿ ಅವಳ ದೇಹವನ್ನು ಬಳಸಿಕೊಳ್ಳುತ್ತಾರೆ ಎಂಬುವುದನ್ನು ತ.ರಾ.ಸು ಬಿಂಬಿಸಿದ ರೀತಿ ಎಂತವರ ಕಣ್ಣಲ್ಲೂ ಕಂಬನಿ ತರಿಸುತ್ತದೆ. ಬರೀ ಕಂಬನಿಯಲ್ಲ ರಕ್ತ ಕಂಬನಿ. ಪುರುಷರ ಮೋಜಿನಾಟಕ್ಕೆ ಮಹಿಳೆ ಮೂಕ ಪ್ರಾಣಿಯಂತೆ ಬಲಿಯಾಗುತ್ತಿದ್ದಾಳೆ. ಇದನ್ನಿಂದು ಮಹಿಳೆ ಅರಿತುಕೊಂಡು ತುಂಬಾ ಎಚ್ಚರದಿಂದ ಬದುಕಬೇಕಾಗಿದೆ.

ಪುರಾತನ ಕಾಲದಿಂದಲೂ ನಾವು ವೇಶ್ಯಾವೃತಿಯನ್ನು ಕಾಣುತ್ತೇವೆ. ವೇಶ್ಯಾವೃತಿಗೆ ಮಹಿಳೆ ಸ್ವ–ಇಚ್ಛೆಯಿಂದ ಇಳಿದಳೋ ಅಥವಾ ಯಾರಾದರೂ ಇಳಿಯುವಂತೆ ಮಾಡಿದರೋ? ವೇಶ್ಯಾವೃತ್ತಿಯ ಹಿಂದಿರುವ ಮರ್ಮವೇನು?

ಇಂದಿಗೂ ಈ ರೋಗ ನಿವಾರಣೆಯಾಗಿಲ್ಲ ಇದಕ್ಕೆ ಕಾರಣಗಳೇನು? ವೇಶ್ಯಾವೃತ್ತಿ ಅಂದು ಹೇಗಿತ್ತು? ಈಗ ಹೇಗೆ ನಡೆಯುತ್ತಿದೆ? ಮುಂದೆ ಏನಾಗುತ್ತದೆ? ಮೊದಲಾದ ಪ್ರಶ್ನೆಗಳಿಗೆ ಉತ್ತರ ಮಸಣದ ಹೂವು ಕಾದಂಬರಿ.

ಹೆಣ್ಣು ವೇಶ್ಯಾವೃತ್ತಿಗೆ ಇಳಿಯಲು ಬಡತನ, ಹಸಿವು, ವಿಷಮ ವಿವಾಹ, ಆರ್ಥಿಕ ತೊಂದರೆ, ಅಸಹಾಯಕತೆ, ಮೊದಲಾದ ಕಾರಣಗಳಿವೆ. ಇದಕ್ಕೆ ಒಂದು ಸಂದರ್ಭದಲ್ಲಿ ಇದ್ದ ಪುರುಷ ಪ್ರಧಾನ ಸಮಾಜ ಕಾರಣವಾಗಿತ್ತು ಎನ್ನಬಹುದು. ಏಕೆಂದರೆ ಈ ಕುರಿತು ಇತಿಹಾಸದಲ್ಲಿ ಸಾಕಷ್ಟು ಆಧಾರಗಳಿವೆ. ಹಾಗಾದರೆ ಇವತ್ತಿನ ಪರಿಸ್ಥಿತಿ ಏನು? ಎಂದರೆ ಹಳೆಯ ಪರಿಸ್ಥಿತಿ ಭಿನ್ನ ಸ್ವರೂಪದಲ್ಲಿ ಮುಂದುವರೆದಿದೆ. ಹೀಗೆ ಈ ಮೈ ಮಾರಿಕೊಳ್ಳುವ ವ್ಯಾಪಾರಕ್ಕೆ ಇಳಿದಾಗ ಹೆಣ್ಣನ್ನು ಪುರುಷರು ಯಾವ ರೀತಿ ಯಂತ್ರದಂತೆ ಉಪಯೋಗಿಸುತ್ತಾರೆ, ಅವಳೊಂದಿಗೆ ಯಾವ ರೀತಿ ಮೃಗೀಯ ವರ್ತನೆ ಮಾಡುತ್ತಾರೆ ಎಂಬುದನ್ನು ತ.ರಾ.ಸು.ರವರು ಕಾದಂಬರಿಯಲ್ಲಿ ಪಾತ್ರಗಳನ್ನು ಕಣ್ಣಿಗೆ ಕಟ್ಟಿ, ಮನಸ್ಸನ್ನು ತಟ್ಟಿ ಬಡಿದೆಬ್ಬಿಸುವಂತೆ ಚಿತ್ರಿಸಿದ್ದಾರೆ.

ಕಾದಂಬರಿಯಲ್ಲಿ ಚಿನ್ನಮ್ಮನಿಗೆ ವೇಶ್ಯಾವೃತ್ತಿ ಅವರ ಮನೆತನದ ಮೂಲ ಕಸುಬು. ಅದಕ್ಕಾಗಿ ಅವಳು ಅದನ್ನು ಮುಂದುವರೆಸಿದಳು. ಇವಳ ತಾಯಿ ವಯಸ್ಸಾದ ಮೇಲೆ ವೇಶ್ಯಾವೃತ್ತಿ ಹಳ್ಳಿಗಿಂತ ಪೇಟೆಯಲ್ಲಿ ಚೆನ್ನಾಗಿ ನಡೆಯುತ್ತದೆ ಎಂದು ಭಾವಿಸಿ ಈ ವೃತ್ತಿಯನ್ನು ಬೆಳೆಸುವ ಜವಬ್ದಾರಿ ನಿನ್ನದು ಎಂದು ಹೇಳಿ ಪೇಟೆಯಲ್ಲಿರುವ ತನ್ನ ಗೆಳತಿ ಪುಟ್ಟರಂಗಮ್ಮನ ಬಳಿ ಇವಳನ್ನು ಬೆಳೆಯಲು ಬಿಡುತ್ತಾಳೆ. ಪುಟ್ಟರಂಗಮ್ಮನ ವಯಸ್ಸಾಗಿ ತೀರಿಹೋದ ಮೇಲೆ ಚಿನ್ನಮ್ಮ ತಾಯಿಯ ಮಾತಿನಂತೆ ಹೆಚ್ಚಿಗೆ ಹಣ ಹಾಕಿ ಆಧುನಿಕ ರೀತಿಯಲ್ಲಿ ಆ ವೃತ್ತಿಯನ್ನು ಮುಂದುವರೆಸುತ್ತಾಳೆ. ಅಲ್ಲಿ ಇವಳ ಹಳೆಯ ಗಿರಾಕಿ ಸೋಮಣ್ಣ ತನ್ನ ಊರಿನ ಬಡ ಕುಟುಂಬದ ಸುಂದರ ಹುಡುಗಿ ಪಾರ್ವತಿಯನ್ನು ಕಂಡು ಇವಳನ್ನು ಚಿನ್ನಮ್ಮನಿಗೆ ಮಾರಾಟ ಮಾಡಿದರೆ ಹೆಚ್ಚು ಹಣ ಸಿಗುವುದೆಂಬ ಆಸೆಯಿಂದ ತನ್ನ ಪ್ರಿಯಕರನೊಂದಿಗೆ ಸುಂದರ ಸಂಸಾರ ಕಟ್ಟುವ ಕನಸು ಕಾಣುತ್ತಿದ್ದ ಪಾರ್ವತಿಯ ಪ್ರಿಯಕರನನ್ನು ಕೊಂದು ಅವಳನ್ನು ಅಪಹರಿಸಿ ಚಿನ್ನಮ್ಮಳಿಗೆ ಮಾರಾಟ ಮಾಡುತ್ತಾನೆ. ವಿಧಿಯಿಲ್ಲದೆ ಪಾರ್ವತಿ ಮೈ ಕೊಟ್ಟು; ಮಾಸದ ಆ ಹಳೆಯ ನೆನಪು ಬಂದಾಗ ತನ್ನ ಮೈಯಂತೆಯೇ ಮಿದುಳನ್ನು ಮಾರಬಹುದಾದರೆ ಒಳ್ಳೆಯದಿತ್ತು. ಅದಕ್ಕೂ ಒಬ್ಬ ಗಿರಾಕಿ ಸಿಕ್ಕು ಉರಿನೆನಪನ್ನು ಮಾರಿ ನಿಶ್ಚಿಂತಳಿರಬಹುದಾಗಿತ್ತು ಎಂದು ಕೊರಗುತ್ತಾಳೆ. ಹೀಗೆ ಈ ವೃತ್ತಿಯಲ್ಲಿ ಮುಂದುವರೆದು ಇವಳಿಗೆ ವಯಸ್ಸಾದಾಗ ಇವಳಿಂದ ಈಗ ಹೆಚ್ಚಿಗೆ ಕೆಲಸವಾಗುವುದಿಲ್ಲ, ಆರೋಗ್ಯ ಕೂಡ ಸರಿಯಾಗಿ ಉಳಿಯುತ್ತಿಲ್ಲ ಎಂದು ಭಾವಿಸಿ ಅವಳನ್ನು ದುಬೈನಲ್ಲಿರುವ ತನ್ನ ಗೆಳತಿಗೆ ಹೆಚ್ಚು ದುಡ್ಡಿನ ಆಸೆಗಾಗಿ ಮಾರಾಟ ಮಾಡುತ್ತಾಳೆ. ದುಬೈನಲ್ಲಿ ಹೆಣ್ಣುಗಳ ಕೊರತೆ ಇರುವುದರಿಂದ ಅವರು ವಯಸ್ಸನ್ನು ಲೆಕ್ಕಿಸದೆ ಹೆಚ್ಚಿಗೆ ದುಡ್ಡು ಕೊಟ್ಟು ಕೊಂಡುಕೊಳ್ಳುತ್ತಿದ್ದರು. ಹೀಗೆ ಜಾನಕಿ, ಭಾಗೀರಥಿ ಎಂಬ ಮೊದಲಾದ ಹುಡುಗಿಯರು ಬಡತನದ ಕಾರಣದಿಂದ ಇವಳ ಬಲೆಗೆ ಸಿಕ್ಕು ಮೈ ಮಾರಿಕೊಳ್ಳುವ ವೃತ್ತಿಯನ್ನು ಮುನ್ನಡೆಸುತ್ತಾರೆ. ಹರೆಯದ ವಯಸ್ಸಿನಲ್ಲಿ ಇವರ ಮೈ ಮಾರಾಟದಿಂದ ಸಾಕಷ್ಟು ಹಣ ಗಳಿಸಿದ ಚಿನ್ನಮ್ಮ ವಯಸ್ಸಾದ ಮೇಲೆ ಇವರಿಗೆ ಕರುಣೆ ತೋರಿಸದೆ ದುಬೈ ನಗರಕ್ಕೆ ಮಾರಾಟ ಮಾಡಿ ಹೆಚ್ಚು ದುಡ್ಡು ಪಡೆಯುತ್ತಾಳೆ. ಅಷ್ಟೇ ಅಲ್ಲದೆ ಸಿಂಗಾರು ಎಂಬ ಒಬ್ಬ ಬಡವ ಕೈ ಕಳೆದುಕೊಂಡು ನಿರುದ್ಯೋಗಿಯಾದ ಯುವಕ ಇವಳ ಬಳಿ ಬಂದಾಗ ಅವನನ್ನು ಸುಂದರ ಹೆಣ್ಣು ಮಕ್ಕಳನ್ನು ಹುಡುಕಿ ತರುವ ಉದ್ಯೋಗಕ್ಕೆ ನೇಮಿಸುತ್ತಾಳೆ. ಮನಸಿಲ್ಲದಿದ್ದರೂ ಆರ್ಥಿಕ ತೊಂದರೆಯಿಂದಾಗಿ ಸಿಂಗಾರು ಆ ಉದ್ಯೋಗವನ್ನು ವಿಧಿಯಿಲ್ಲದೆ ಮಾಡುತ್ತಾನೆ. ಹೀಗೆ ಪರಿಸ್ಥಿತಿಗೆ

ಕಟ್ಟುಬಿದ್ದು ಚಿನ್ನಮ್ಮನ ನರಕಕ್ಕೆ ಇವರೆಲ್ಲರೂ ಸೇರಿಕೊಳ್ಳುತ್ತಾರೆ. ಹೀಗೆ ಕಾದಂಬರಿಯಲ್ಲಿ ಹಣ ಗಳಿಸುವ ಮತ್ತು ಪೂರ್ವಜರ ನಿಯಮವನ್ನು ಮುಂದುವರೆಸುವ ಅಜ್ಞಾನದಿಂದಾಗಿ ಮಾನವೀಯತೆಯನ್ನು ಮರೆತು ನಡೆಯುವ ದೃಶ್ಯಗಳನ್ನು ಕಾಣುತ್ತೇವೆ. ಪ್ರಸ್ತುತ ಪರಿಸ್ಥಿತಿಯೂ ಇದೆ ರೀತಿಯಾಗಿದೆ. ಹಣದಿಂದ ತಾವು ಎಲ್ಲವನ್ನೂ ಕೊಂಡುಕೊಳ್ಳಬಹುದು ಎಂಬ ತಪ್ಪು ತಿಳುವಳಿಕೆಯಿಂದ ಮಾನವ ಯಾವುದೇ ಸಂಬಂಧಗಳಿಗೆ ಬೆಲೆ ಕೊಡದೆ ತನ್ನ ಮೃಗೀಯ ವರ್ತನೆಯಿಂದ ಸುಂದರ ಉದ್ಯಾನವನದಂತಿರಬೇಕಾದ ತನ್ನ ಬಾಳನ್ನು ನರಕಮಾಡಿಕೊಳ್ಳುತ್ತಿದ್ದಾನೆ. ಹಣ, ಅಧಿಕಾರ, ವ್ಯವಸ್ಥೆಗೆ ಕಟ್ಟು ಬಿದ್ದು ಚಿನ್ನಮ್ಮ ನಡೆಸಿದ ವೇಶ್ಯಾವೃತ್ತಿಗೆ ಅದೆಷ್ಟೋ ಮುಗ್ಧ ಹೆಣ್ಣು ಮಕ್ಕಳು ಬಲಿಯಾದರು. ವರ್ತಮಾನದಲ್ಲೂ ಈ ರೀತಿಯ ಘಟನೆಗಳು ಪುನರಾವರ್ತನೆಯಾಗುತ್ತಿವೆ. ಹೆಣ್ಣು ಮಕ್ಕಳು ಮೈ ಮಾರಿಕೊಳ್ಳುವ ವೃತ್ತಿಗೆ ಬಲಿ ಬೀಳುವುದಕ್ಕೆ ಅವರ ಜೀವನದ ಅನೇಕ ಸಮಸ್ಯೆಗಳು ಕಾರಣವಾಗಿವೆ. ಆದರೆ ಈ ಕಸುಬು ಬೆಳೆವಣಿಗೆ ಹೊಂದಲು ಕಾರಣರ್ಯಾರು? ಕೇವಲ ಹೆಣ್ಣೇ? ಅಥವಾ ಹೆಣ್ಣನ್ನು ಬಯಸಿಬರುವ ಗಂಡಿನದೇ? ಇಬ್ಬರೂ ಕಾರಣಕರ್ತರು ಅಲ್ಲವೇ? ಆದರೆ ಸಮಾಜ ಕೇವಲ ಹೆಣ್ಣನ್ನೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತದೆ. ಪುರಾತನ ಕಾಲದಿಂದಲೂ ಕವಿಗಳು, ವಚನಕಾರರರು, ಸಮಾಜ ಸುಧಾರಕರು, ದಾಸರು ಮೊದಲಾದವರು ಲಿಂಗ ತಾರತಮ್ಯವನ್ನು ಹೋಗಲಾಡಿಸಲು ತಮ್ಮ ಬದುಕಿನುದ್ದಕ್ಕೂ ಹೋರಾಡಿದರು. ಈ ಸಂದರ್ಭದಲ್ಲಿ ಜೇಡರ ದಾಸಿಮಯ್ಯನ ಒಂದು ವಚನ ನೆನಪಾಗುತ್ತದೆ...

> ***"ಮೊಲೆ ಮೂಡಿ ಬಂದರೆ ಹೆಣ್ಣೆಂಬರು***
> ***ಗಡ್ಡ, ಮೀಸೆ ಬಂದರೆ ಗಂಡೆಂಬರು***
> ***ನಡುವೆ ಸುಳಿಯುವಾತ್ಮವು***
> ***ಹೆಣ್ಣೂ ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥ"***

ವಚನಕಾರರು ತಮ್ಮ ನುಡಿಗಳಲ್ಲಿ ಭೌತಿಕ ಸ್ವರೂಪ ಭಿನ್ನವಾಗಿದೆ ಆದರೆ ಆತ್ಮ ಒಂದೇ; ಆತ್ಮಕ್ಕೆ ಯಾವುದೇ ಲಿಂಗವಿಲ್ಲವೆಂದರು. ಅದು ನಿಜ ಆದರೆ ಅದನ್ನು ಪಾಲಿಸುವ ಮನಸ್ಸೆಲ್ಲಿದೆ? ಇಷ್ಟೊಂದು ಪ್ರಯತ್ನಪಟ್ಟರೂ ಸಮಸ್ಯೆ ನಿವಾರಣೆಯಾಗುತ್ತಿಲ್ಲ ಕಾರಣವೇನು? ಕೆಲವೊಂದು ಪ್ರದೇಶದಲ್ಲಿ ದೇವರ ಹೆಸರಿನಲ್ಲಿ ಬಸವಿ ಬಿಡುವ ಪದ್ಧತಿ ಇದೆಯಲ್ಲಾ ಏನು ಉತ್ತರ? ಸ್ತ್ರೀ–ಪುರುಷರಲ್ಲಿ ಸಮಾನತೆ ಎಂಬ ಮಾತಿನ ಪಾಲನೆ ಎಲ್ಲಿ? ಇವತ್ತು ಆರು ತಿಂಗಳ ಹಸುಗೂಸಿನಿಂದ ಹಿಡಿದು ಮುದಿ ವಯಸ್ಸಿನ ಹೆಂಗಸರ ಮೇಲೂ ಅತ್ಯಾಚಾರ, ದೌರ್ಜನ್ಯಗಳು ನಡೀತಾನೆ ಇವೆಯಲ್ಲ ಇದಕ್ಕೆಂದು ಮುಕ್ತಿ? ಈ ಎಲ್ಲ ವಿಚಾರಗಳ ಕುರಿತು ಆಲೋಚಿಸುವಂತೆ ಮಾಡಲು ಮಸಣನದ ಹೂವು ಕಾದಂಬರಿ ಕಾರಣವಾಗಿದೆ.

ಕಾದಂಬರಿಯಲ್ಲಿ ಬರುವ ಪುಟ್ಟರಂಗಮ್ಮ, ತಾಯಮ್ಮ, ಚಿನ್ನಮ್ಮ ಮೊದಲಾದ ಪಾತ್ರಗಳು ಹಣ ಮತ್ತು ವ್ಯವಸ್ಥೆಗೆ ಕಟ್ಟು ಬಿದ್ದು ಹೆಣ್ಣು ಮಕ್ಕಳನ್ನು ಮಾರಾಟ ಮಾಡುವ ಮೂಲಕ ಯಾವುದೇ ವಿವೇಚನೆ ಇಲ್ಲದೆ ವೇಶ್ಯಾವೃತ್ತಿಯನ್ನು ಮುಂದುವರೆಸುತ್ತಾರೆ. ಪ್ರಸ್ತುತ ಸಮಾಜದಲ್ಲಿ ಈ ವೇಶ್ಯಾವೃತ್ತಿ ಅಂತರರಾಷ್ಟ್ರೀಯ ವ್ಯಾಪಾರವಾಗಿ ನಡೆಯುತ್ತಿದೆ ಎನ್ನುವುದಕ್ಕೆ ಕಣ್ಣಮುಂದೆ ಸಾಕಷ್ಟು ಉದಾಹರಣೆಗಳಿವೆ. ಇಂದು ದಿನಬೆಳಗಾದರೆ ದೂರದರ್ಶನ, ವೃತ್ತ ಪತ್ರಿಕೆಗಳಲ್ಲಿ ಕಾಣೆಯಾದ ಮಹಿಳೆಯರ ಪಟ್ಟಿಗಳು ಇದಕ್ಕೊಂದು ಒಳ್ಳೆಯ ನಿದರ್ಶನವೆನ್ನಬಹುದು.

ಕೃತಿಯಲ್ಲಿನ ಪಾರ್ವತಿ, ಶಾಂತಾ, ವೆಂಕಟಮ್ಮ, ಭಾಗೀರಥಿ ಮೊದಲಾದ ಪಾತ್ರಗಳು ಸಮಾಜದಲ್ಲಿ ಬಹಳಷ್ಟಿವೆ. ಇಂದಿಗೂ ಎಷ್ಟೋ ಹೆಣ್ಣು ಮಕ್ಕಳು ನಾನಾ ಕಾರಣಗಳಿಂದಾಗಿ ಮೈ ಮಾರಿಕೊಂಡು ನರಕಯಾತನೆ ಅನುಭವಿಸುತ್ತಿದ್ದಾರೆ. ಪುರುಷನ ಕಾಮಭೋಗಕ್ಕೆ ಬಲಿಯಾಗುತ್ತಿದ್ದಾರೆ. ಇದಕ್ಕೆಲ್ಲ ಮೂಲ ಕಾರಣವನ್ನು ಹುಡುಕಿದರೆ ಸಮಾಜದ

ರೋಗಗ್ರಸ್ಥ ವ್ಯವಸ್ಥೆ ಕಣ್ಮುಂದೆ ಬಂದು ನಿಲ್ಲುತ್ತದೆ. ನಮ್ಮ ದೇಶ ಪುರುಷ ಪ್ರಧಾನವಾದುದು. ಎಲ್ಲ ಅಧಿಕಾರವೂ ಅವನ ಕೈಯಲ್ಲೇ. ಮಹಿಳೆ ಕೇವಲ ಹೆರುವ, ದುಡಿಯುವ, ಗಂಡಸಿನ ಕಾಮ ತೃಷೆ ತೀರಿಸುವ ವಸ್ತುವಾಗಿದ್ದಳು. ಮಹಿಳೆಯನ್ನು ದುರ್ಬಲಳು, ಅಸಹಾಯಕಳು, ಅಬಲೆ ಎಂದು ಪರಿಗಣಿಸಲಾಗಿತ್ತು. ಈ ಹೇಳಿಕೆಗೆ ಇತಿಹಾಸದಲ್ಲಿ ಸಾಕಷ್ಟು ದಾಖಲೆಗಳಿವೆ. ಕೆಲವು ಮಹಾನ್ ವ್ಯಕ್ತಿಗಳ ಪ್ರಯತ್ನದಿಂದ ಕಳೆದ ಶತಮಾನದಿಂದ ಸ್ತ್ರೀ–ಪುರುಷರು ಸಮಾನರು ಎಂದು ಭಾವಿಸಲಾಗಿದೆ. ಆದರೆ ಅದು ತೋರಿಕೆಗೆ ಮಾತ್ರ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮೊದಲಾದ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆ ಪುರುಷನಿಂದ ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾಳೆ. ಇದಕ್ಕೆ ಸಾಕಷ್ಟು ನಿದರ್ಶನಗಳು ಕಣ್ಮುಂದೆ ಹರಿದಾಡುತ್ತಿವೆ. ಮಹಿಳೆಯ ಮೇಲಿನ ಪುರುಷನ ಅಧಿಕಾರ, ದರ್ಪ, ದೌರ್ಜನ್ಯ ಮೊದಲಾದವುಗಳು ಇನ್ನೂ ಜೀವಂತವಾಗಿವೆ. ಈ ಸಂದರ್ಭದಲ್ಲಿ ಗಾಂಧೀಜಿಯವರ ಒಂದು ಮಾತು ನೆನಪಿಗೆ ಬರುತ್ತದೆ. ಅದೇನೆಂದರೆ "ಯಾವಾಗ ಮಹಿಳೆ ಅರ್ಧರಾತ್ರಿ ಯಾವುದೇ ಭಯ–ಭೀತಿ ಇಲ್ಲದೆ ಏಕಾಂಗಿಯಾಗಿ ಓಡಾಡುತ್ತಾಳೋ ಆವಾಗ ನಮ್ಮ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ದೊರೆತ ಹಾಗೆ". ನಮ್ಮನ್ನು ನಾವು ಸ್ವ–ವಿಮರ್ಶೆ ಮಾಡಿಕೊಂಡರೆ ನಮ್ಮ ದೇಶಕ್ಕೆ ಇನ್ನೂ ಸ್ವಾತಂತ್ರ್ಯವೇ ಸಿಕ್ಕಿಲ್ಲ ಅನ್ನಿಸುತ್ತದೆ. ಸ್ವಾತಂತ್ರ್ಯ ದೊರಿತಿದೆ ಎನ್ನುವ ಮನಸ್ಸುಗಳು ನಿರ್ಭಯಾ ಘಟನೆಗೆ ಉತ್ತರ ನೀಡಲಿ. ಹೀಗೆ ಈ ಎಲ್ಲ ವಿಷಯಗಳ ಕುರಿತು ವಿವೇಚನೆ ಮಾಡುವ ರೀತಿಯಲ್ಲಿ ಮಸಣದ ಹೂವು ಕಾದಂಬರಿ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತದೆ.

ತ.ರಾ.ಸು.ರವರ ಕಾದಂಬರಿಯ ಭಾಷೆ ಸರಳ, ಶೈಲಿ ತುಂಬಾ ಸುಂದರ. ವಿಷಯವಸ್ತು ಓದುಗರನ್ನು ವೈಚಾರಿಕವಾಗಿ ಚಿಂತಿಸುವಂತೆ ಮಾಡುತ್ತದೆ. ಜೀವನದ ಕಹಿ ಸತ್ಯವನ್ನು ತಿಳಿಸಿ ಸಮಾಜದ ಒಳಿತಿಗೆ ಒಳ್ಳೆಯ, ಮಾನವೀಯ ಮನಸ್ಸುಗಳನ್ನು ಸೃಷ್ಟಿ ಮಾಡುವಂತೆ ಕಾದಂಬರಿಕಾರನ ರಚನೆಯಾಗಿದೆ.

"ವೇಶ್ಯಾವೃತ್ತಿ" ಎಂಬುದು ಸಮಾಜಕ್ಕೆ ಅಂಟಿದ ಜಾಡ್ಯ. ಮಹಿಳೆ ಪುರುಷನ ಕೈಯಲ್ಲಿರುವ ಯಂತ್ರವಲ್ಲ, ಅವಳಿಗೂ ಭಾವನೆಗಳಿವೆ. ಅವಳ ಮೇಲೆ ಯಾವದೇ ನಿರ್ಬಂಧ ಸಲ್ಲದು. ವಿಷಮ ವಿವಾಹ, ಬಡತನ ಮೊದಲಾದ ಸಾಮಾಜಿಕ, ಆರ್ಥಿಕ, ಮಾನಸಿಕ ಕಾರಣಗಳಿಂದಾಗಿ ಮಹಿಳೆ ವೇಶ್ಯಾವೃತ್ತಿಯನ್ನು ಅವಲಂಭಿಸಿದ್ದಾಳೆ. ಈ ಎಲ್ಲ ಸಮಸ್ಯೆಗಳನ್ನು ತೊಲಗಿಸಿ ಅವಳಿಗೆ ಪುರುಷನಿಗೆ ಸಮಾನವಾದ ಸ್ಥಾನಮಾನ ನೀಡಿ ಅದರಂತೆ ನಡೆಯಿರಿ. ಹೀಗಾದಾಗ ಮಾತ್ರ ಭವಿಷ್ಯದಲ್ಲಿ ಈ ವೇಶ್ಯಾವಾಟಿಕೆಯ ಸಮಸ್ಯೆಯನ್ನು ಬೇರುಸಹಿತ ಕಿತ್ತೊಗೆಯಬಹುದು ಎಂಬುದನ್ನು "ಮಸಣದ ಹೂವು" ಕಾದಂಬರಿ ಧ್ವನಿಸುತ್ತದೆ. ಹೆಣ್ಣನ್ನು ನಿಮ್ಮ ಕಾಮ ತೃಷೆ ಇಂಗಿಸುವ ಯಂತ್ರದಂತೆ ಕಾಣದಿರಿ. ಅವಳು ಸೂಳೆಯಲ್ಲ; ಅವಳನ್ನು ಸಮಾಜ ಆ ರೀತಿ ಮಾಡಿದೆ. ಅವಳಲ್ಲಿ ನಿಮ್ಮ ತಾಯಿ, ಮಗಳು, ತಂಗಿಯನ್ನು ಕಾಣಿರಿ ಬದುಕು ಸುಂದರವಾಗುತ್ತದೆ. ಹೆಣ್ಣು–ಗಂಡು ಇಬ್ಬರಲ್ಲೂ ಕಾಮದ ಭಾವನೆಗಳಿವೆ. ಕೆಲವರಿಗೆ ಹೆಚ್ಚಿದ್ದರೆ, ಕೆಲವರಿಗೆ ಕಡಿಮೆ. ಇದು ನಿಸರ್ಗ ಸಹಜ ಭಾವ. ಆದರೆ ಮನಸ್ಸಿನಲ್ಲಿ ಪ್ರತಿ ಕ್ಷಣಕ್ಕೂ ಅಲೆಗಳಂತೆ ಏಳುವ ಭಾವನೆಗಳನ್ನು ಹಿಡಿತದಲ್ಲಿಡದೆ ಅವುಗಳಂತೆ ನಡೆಯುತ್ತಾ ಹೋದರೆ ಜೀವನ ಹೇಗಾಗಬಾರದು ನೀವೆ ಊಹಿಸಿ. ಇದು ಕೇವಲ ಕಾಮದ ಭಾವನೆ ಮಾತ್ರವಲ್ಲ, ಇನ್ನುಳಿದ ಎಲ್ಲಾ ಭಾವಗಳಿಗೂ ಸಂಬಂಧಿಸಿದೆ.

ಭೂಮಿಯ ಮೇಲೆ ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ. ಯಾರೂ ಯಾರನ್ನು ಯಾವುದೇ ನಿಯಮಗಳಿಂದ ನಿರ್ಭಂದಿಸಬೇಕಾಗಿಲ್ಲ. ಪ್ರಕೃತಿಯ ಕೂಸು ಮಾನವ. ಅದರ ಮಡಿಲಲ್ಲೆ ನಮ್ಮ ಜೀವನ. ಪ್ರಕೃತಿ ಯಾವುದೇ ರೀತಿಯ ತಾರತಮ್ಯವನ್ನು ಮಾಡಲಾರದು. ಇನ್ನೂ ಲಿಂಗ ತಾರತಮ್ಯ ಮಾಡಲು ನಾವ್ಯಾರು ಹೇಳಿ. 2011 ರ ಜನಗಣತಿಯ ಪ್ರಕಾರ

ಭಾರತದ ಸಾಕ್ಷರತೆಯ ಪ್ರಮಾಣ 73% ರಷ್ಟಿದೆ. ಈ ಹಿಂದೆ ಆದ ಆವಾಂತರಗಳಿಗೆ ಅನಕ್ಷರತೆಯೆ ಕಾರಣ ಹೇಳುತ್ತಾ ಬಂದಿದ್ದೇವೆ. ಇವತ್ತು ಇಷ್ಟೊಂದು ಅಕ್ಷರಸ್ಥರಾದರೂ ಸಮಸ್ಯೆಗಳು ಹಾಗೇ ಇವೆ. ಸಮಸ್ಯೆಗಳು ಇದ್ದಾಗ ಅದನ್ನು ನಿರ್ಮೂಲನ ಮಾಡಬೇಕೆಂದು ಸಾಹಿತ್ಯ ಬರೆಯುತ್ತೇವೆ, ಓದುತ್ತೇವೆ, ಇದರ ಕುರಿತು ದೊಡ್ಡ ದೊಡ್ಡ ವೇದಿಕೆಗಳಲ್ಲಿ ಮಾತನಾಡುತ್ತೇವೆ. ಆದರೆ ಅದರ ಪಾಲನೆ? ಅದು ಮಾತ್ರ ಮರೆತು ಹೋಗುತ್ತದೆ ಅಲ್ಲವೇ? ನುಡಿದಂತೆ ನಡಿಯೋದು ಯಾವಾಗ? ನುಡಿದಂತೆ ನಡೆದಿದ್ದೇ ಆದರೆ ನಮ್ಮ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆಯಂತಹ ಮೊದಲಾದ ಸಮಸ್ಯೆಗಳು ಕಳೆಗಳಂತೆ ಬೆಳೆಯುತ್ತಿರಲಿಲ್ಲ.

**ಸಮಾರೋಪ**

ಒಟ್ಟಿನಲ್ಲಿ ತ.ರಾ.ಸು.ರವರ ಮಸಣದ ಹೂವು ಕಾದಂಬರಿ ಪ್ರಜ್ಞೆ ತಪ್ಪುತ್ತಿರುವ ನಮ್ಮನ್ನು ಎಚ್ಚರಿಸಿ ರಾಜಕೀಯ, ಸಾಮಾಜಿಕ, ಆರ್ಥಿಕ ಅಸಮಾನತೆ, ಲಿಂಗ ತಾರತಮ್ಯದಿಂದಾಗಿ ಹುಟ್ಟುತ್ತಿರುವ ವೇಶ್ಯಾವೃತ್ತಿಯಂತಹ ಸಮಸ್ಯೆಗಳನ್ನು ನಿರ್ಮೂಲನ ಮಾಡಿ ಸಮಾನತೆಯ ಆಧಾರದ ಮೇಲೆ ಮಾನವೀಯ ಮೌಲ್ಯಗಳನ್ನೊಳಗೊಂಡ ಸುಂದರ ಉದ್ಯಾನವನವನ್ನು ನಿರ್ಮಾಣ ಮಾಡುವ ಮನಸ್ಸುಗಳನ್ನು ನಿರ್ಮಾಣ ಮಾಡುತ್ತದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. "ಮಸಣದ ಹೂವು" ವ್ಯರ್ಥವಲ್ಲ. ಹೂವು ಎಲ್ಲಿದ್ದರೂ ಹೂವೇ. ಅದರ ಪರಿಮಳ ಎಲ್ಲಿದ್ದರೂ ಒಂದೇ. ತ.ರಾ.ಸು ರವರು ಹೆಣ್ಣನ್ನು ಇಲ್ಲಿ ಹೂವಿಗೆ ಹೋಲಿಸಿದ್ದಾರೆ. ಅವಳ ಬದುಕಿನ ದಾರುಣ ಸ್ಥಿತಿಗಳನ್ನು ಮಸಣಕ್ಕೆ ಹೋಲಿಸಿದ್ದಾರೆ. ಹೆಣ್ಣಿನ ಬದುಕು ಮಸಣದಂತಹ ದಾರುಣ ಸ್ಥಿತಿಗಳಿಂದ ಬಿಡಿಸಿಕೊಂಡು ಹೂವಿನಂತೆ ಸಮಾನತೆಯ ಅಂಗಳದಲ್ಲಿ ಜೀವಕುಸುಮವಾಗಿ ಅರಳಬೇಕು ಎಂಬ ಆಶಯ ಈ ಕಾದಂಬರಿಯದಾಗಿದೆ.

**ಆಕರ ಗ್ರಂಥ**


- ತ.ರಾ.ಸು. *ಮಸಣದ ಹೂ.* ವಸಂತ ಪ್ರಕಾಶನ.


**ಪರಾಮರ್ಶನ ಗ್ರಂಥಗಳು**


- ಅಬೂಬಕ್ಕರ್ ಸಾ. ರಾ. (2019). *ಚಂದ್ರಗಿರಿ ತೀರದಲ್ಲಿ.* ಚಂದ್ರಗಿರಿ ಪ್ರಕಾಶನ.
- ಅನುಪಮಾ ನಿರಂಜನ. (2013). *ಮಾಧವಿ.* ಡಿ.ವಿ.ಕೆ. ಮೂರ್ತಿ ಪ್ರಕಾಶನ.
- ತ.ರಾ.ಸು. (2018). *ಚಂದನದ ಗೊಂಬೆ.* ಹೇಮಂತ ಸಾಹಿತ್ಯ.
- ತ.ರಾ.ಸು. (2014).ಬಿಡುಗಡೆಯ ಬೇಲಿ. (ನಾಲ್ಕನೇ ಮುದ್ರಣ). ಓಂ ಶಕ್ತಿ ಪ್ರಕಾಶನ.